# 9. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೃಗವಧೆ ತೀರ್ಥಹಳ್ಳಿ



## ಶಾಲಾ ಕೈತೋಟ



ಶಾಲಾ ಕೈತೋಟವು ಶಾಲೆಯ ವಾತಾವರಣವನ್ನು ಸುಂದರ ಗೊಳಿಸಿದೆ. ಶಾಲೆಯ ಆವರಣ ಗೋಡೆಯ ಸುತ್ತಲೂ ಅಲಂಕಾರಿಕ ಗಿಡಗಳನ್ನು ನೆಡಲಾಗಿದೆ. ಹಾಗೆಯೇ ಬೇರೆ ಬೇರೆ ಜಾತಿಯ ಅಲಂಕಾರಿಕ ಹೂವಿನ ಗಿಡಗಳು, ಐದು ತೆಂಗಿನ ಮರಗಳು, ಸಪೋಟ ಹಣ್ಣಿನ ಗಿಡ, ನೆಲ್ಲಿಕಾಯಿ, ಮಾವು, ಹೀಗೆ ಬೇರೆ ಬೇರೆ ಮರಗಳಿವೆ. ಅಲಂಕಾರಿಕ ಗಿಡಗಳನ್ನು ಕಾಲ ಕಾಲಕ್ಕೆ ಕತ್ತರಿಸಿ ಇದರಿಂದ ಶಾಲಾ ಸೌಂದರ್ಯವು ಇಮ್ಮಡಿಯಾಗುವಂತೆ ಮಾಡಲಾಗಿದೆ.

## ಶಾಲಾ ಹಳೆಯ ಕಟ್ಟಡ



1958–59 ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ ಕಟ್ಟಡವು ಈ ಹಿಂದೆ ಬೀಳುವ ಸ್ಥಿತಿಯನ್ನು ತಲುಪಿತ್ತು. ಆದರೆ ಎಸ್.ಡಿ.ಎಂ.ಸಿ ಯವರು ಮತ್ತು ಊರಿನ ಯುವಕ ಸಂಘದ ಸಹಕಾರದಿಂದ ಜಿ. ಪಂಚಾಯತ್ ವತಿಯಿಂದ 2 ಲಕ್ಷ ಅನುದಾನ ಬಿಡುಗಡೆಯಾಗಿ ಇಡೀ ಕಟ್ಟಡವನ್ನು ಮರು ನವೀಕರಣ ಮಾಡಲಾಗಿದೆ. ಗೋಡೆಯನ್ನು ಸಂಪೂರ್ಣವಾಗಿ ಸಿಮೆಂಟ್‌ನಿಂದ ದುರಸ್ಥಿ ಮಾಡಲಾಗಿದೆ. ಒಳಗೆ ಟೈಲ್ಸ್‌ಗಳನ್ನು ಹಾಕಿ ಈಗ ಕಟ್ಟಡ ಸುಸಜ್ಜಿತವಾಗಿದೆ

## ನೀರಿನ ವ್ಯವಸ್ಥೆ



ಶಾಲೆಯಲ್ಲಿ ಈ ಹಿಂದೆ ನೀರಿನ ಸೌಲಭ್ಯ ವ್ಯವಸ್ಥಿತವಾಗಿರಲಿಲ್ಲ. ನಂತರದ ದಿನಗಳಲ್ಲಿ ಶಿಕ್ಷಕರ ಪ್ರಯತ್ನದಿಂದಾಗಿ ಜಿಲ್ಲಾ ಪಂಚಾಯತ್ ವತಿಯಿಂದ ಶಾಲೆಗೆ ಸುಮಾರು 2 ಲಕ್ಷ ಅನುದಾನ ಬಿಡುಗಡೆಗೊಂಡು 3 ಸಾವಿರ ಲೀಟರ್ ವಾಟರ್ ಟ್ಯಾಂಕ್ ಮತ್ತು ಹುಡುಗರಿಗೆ ಮತ್ತು ಹುಡುಗಿಯರಿಗೆ ಬೇರೆ ಬೇರೆ ಕೈ ತೊಳೆಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದೇ ನೀರನ್ನು ಪೈಪುಗಳ ಮೂಲಕ ಕೈತೋಟಕ್ಕೆ ಹಾಯಿಸಲು ವ್ಯವಸ್ಥೆ ಮಾಡಲಾಗಿದೆ. ಪ್ರತೀ ಗುಂಪಿಗೂ 10ರಿಂದ 15 ನಲ್ಲಿಗಳನ್ನು ಅಳವಡಿಸಲಾಗಿದೆ.

## ಶಾಲಾ ಆಟದ ಮೈದಾನ.



ಶಾಲೆಯ ಆವರಣದಲ್ಲಿ 300 ರಿಂದ 400 ಅಕೇಶಿಯಾ ಮರಗಳಿದ್ದವು. ಅವುಗಳು ಮಳೆಗಾಲದಲ್ಲಿ ಶಾಲಾ ಕಟ್ಟಡದ ಮೇಲೆ ಬೀಳುತ್ತಿದ್ದವು. ಆದ್ದರಿಂದ ಎಸ್. ಡಿ. ಎಂ. ಸಿ ಯವರ ಸಹಕಾರದೊಂದಿಗೆ ಮರಗಳನ್ನು ಕಟಾವು ಮಾಡಿಸಿ ಆಟದ ಮೈದಾನವನ್ನು ವಿಸ್ತಾರಗೊಳಿಸಲಾಯಿತು. ಆದರೆ ಸಮತಟ್ಟಾದ ಆಟದ ಮೈದಾನವಿಲ್ಲದ ಕಾರಣ ಮಕ್ಕಳಿಗೆ ಆಟವಾಡಲು ಕಷ್ಟವಾಗುತ್ತಿತ್ತು. ನಂತರ ಗ್ರಾಮ ಪಂಚಾಯತಿಯವರ ಅನುದಾನವನ್ನು ಬಳಸಿಕೊಂಡು ಉದ್ಯೋಗಖಾತ್ರಿ ಯೋಜನೆ ಯಡಿಯಲ್ಲಿ ಆಟದ ಮೈದಾನವನ್ನು ಸಮತಟ್ಟುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

## ಸ್ಮಾರ್ಟ್ ಕ್ಲಾಸ್



2017–18 ನೇ ಸಾಲಿನಲ್ಲಿ ಸ.ಹಿ.ಪ್ರಾ ಶಾಲೆ ಮೃಗವಧೆ ಇಲ್ಲಿಗೆ ಗ್ರಾಮದ ಶಂಕರ ಯುವಕ ಸಂಘ ಮತ್ತು ದಾನಿಗಳ ಸಹಕಾರದಿಂದ ಸ್ಮಾರ್ಟ್ ಕ್ಲಾಸ್ ತರಗತಿಯನ್ನು ಪ್ರಾರಂಭಿಸಲಾಗಿದೆ. ಸ್ಮಾರ್ಟ್ ಕ್ಲಾಸ್ ತರಗತಿಯ ಎಲ್ಲ ಪರಿಕರಗಳನ್ನು ಸೆಲ್ಕೋ ಸೋಲಾರ ಪ್ರೈವೇಟ್ ಲಿಮಿಟೆಡ್ ಇವರು ಶಾಲೆಗೆ ಬಂದು ಎಲ್ಲವನ್ನು ಅಳವಡಿಸಿದ್ದಾರೆ. ಸ್ಮಾರ್ಟ್ ಕ್ಲಾಸ್ ತರಗತಿಯಲ್ಲಿ 5, 6 ಮತ್ತು 7 ನೇ ತರಗತಿ ಮಕ್ಕಳಿಗೆ ಇಂಗ್ಲೀಷ್ ಗ್ರಾಮರ್, ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಸಂಬಂದಿಸಿದಂತೆ ಪಠ್ಯವನ್ನು ಅಳವಡಿಸಲಾಗಿದೆ. ಇದರಿಂದ ಮಕ್ಕಳಿಗೆ ಕಲಿಕೆಯನ್ನು ಪರಿಣಾಮಕಾರಿಯಾಗಿ ಮಾಡಲು ಅನುಕೂಲವಾಗಿದೆ.